RDPR/57/SGY/2022-RDPR-SUV-RDPR SEC

I/279808/2022

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕೆರೆಗಳ ಸಮಗ್ರ ಅಭಿವೃದ್ಧಿಪಡಿಸಲು ಲೆಕ್ಕ ಶೀರ್ಷಿಕೆ-4702 ರಡಿ ಬೆಂಗಳೂರು ನಗರ ಜಿಲ್ಲೆಯ ಕೆರೆಗಳ ಆಯ್ಕೆ ಪಟ್ಟಿಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ;**
1. 2022-23ನೇ ಸಾಲಿನ ರಾಜ್ಯದ ಆಯವ್ಯಯದಡಿ ಕಂಡಿಕೆ-216 ರಲ್ಲಿ ಘೋಷಣೆ ದಿನಾಂಕ:04.03.2022
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:42:ಸುಗ್ರಾಯೋ:2022, ದಿ:18.04.2022.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ, ರವರ ಪತ್ರ ಸಂ: ಆಡಳಿತ(5)/ಕೆರೆ-01/2022-23, ದಿನಾಂಕ:27-05-2022

**ಪ್ರಸ್ತಾವನೆ:**

ಪ್ರಾಚೀನ ಕಾಲದಿಂದಲೂ ಕೆರೆಗಳು ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳೊಂದಿಗೆ ಬೆಳೆದು ಬಂದು ಜನಜೀವನಕ್ಕೆ ಆಧಾರವಾಗಿವೆ. ದನಕರುಗಳಿಗೆ, ಪಶು-ಪಕ್ಷಿಗಳಿಗೆ ಮತ್ತು ಜನಸಾಮಾನ್ಯರಿಗೆ ಕುಡಿಯುವ ನೀರು ಹಾಗೂ ದಿನ ಬಳಕೆಯ ನೀರು, ಮೀನುಗಾರಿಕೆ, ಪರಿಸರದ ಸಮತೋಲನ ಕಾಪಾಡುವುದು, ಭೂ ಅಂತರ್ಜಲದ ಅಭಿವೃದ್ಧಿ ಇತ್ಯಾದಿ ಕೆರೆಗಳ ಪ್ರಮುಖ ಉಪಯೋಗಗಳಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಏರುತ್ತಿರುವ ಜಾಗತಿಕ ತಾಪಮಾನದಿಂದ ಅಂತರ್ಗತ ಜಲಮೂಲಗಳು ಬತ್ತಿ ಹೋಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಹಾಗೂ ಕೃಷಿ ಚಟುವಟಿಕೆಗಳಿಗೆ ಅತ್ಯಾವಶ್ಯಕವಾಗಿ ಅಗತ್ಯವಿರುವ ನೀರಿಗಾಗಿ ಹಾಹಾಕಾರ ತಲೆದೋರುತ್ತಿರುವುದನ್ನು ಮನಗಂಡು ಇದಕ್ಕೆ ಪೂರಕವಾಗಿ ಪರಿಹಾರೋಪ ಮಾರ್ಗವನ್ನು ರೂಪಿಸುವ ಉದ್ದೇಶದಿಂದ 2022-23 ನೇ ಸಾಲಿನ ರಾಜ್ಯ ಆಯವ್ಯಯದಡಿ ಉಲ್ಲೇಖ(1) ರಲ್ಲಿ ಘೋಷಿಸಲಾದಂತೆ, ರಾಜ್ಯದ 33000 ಗ್ರಾಮ ಪಂಚಾಯಿತಿ ಕೆರೆಗಳನ್ನ ಸರ್ವೇ ಮಾಡಿಸಿ, ಪ್ರಸ್ತುತ ಪ್ರಾರಂಭಿಕ ಹಂತವಾಗಿ 1000 ಕೆರೆಗಳನ್ನು ಗುರುತಿಸಿ ಸಮಗ್ರ ಅಭಿವೃದ್ಧಿ ಪಡಿಸಲು ಸರ್ಕಾರವು ತೀರ್ಮಾನಿಸಿದೆ.

ಆಯ್ಕೆ ಮಾಡಿದ ಕೆರೆಗಳನ್ನು ಸರ್ವೇ ಮಾಡಿಸಿ, ಒತ್ತುವರಿ ಆಗದಂತೆ ಗಡಿಯನ್ನು ಗುರುತಿಸಿ ಹದ್ದು ಬಸ್ತು ಪಡಿಸುವುದು (ಬೌಂಡರಿ ಫಿಕ್ಸ್ ಮಾಡುವುದು), ಕೆರೆಗಳಲ್ಲಿನ ಹೂಳನ್ನು ಎತ್ತಿ ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದು, ಬೆಳೆದಿರುವ ಗಿಡ-ಗಂಟೆಗಳನ್ನು ತೆರವುಗೊಳಿಸುವುದು, ಕೆರೆಗಳ ಏರಿ ಭದ್ರ ಪಡಿಸುವುದು, ಕೆರೆಗಳ ತೂಬು ಮತ್ತು ಕೋಡಿ ದುರಸ್ತಿಗೊಳಿಸುವುದು, ಕೆರೆಗಳಿಗೆ ನೀರು ಹರಿದು ಬರುವ ಪೋಷಕ ಕಾಲುವೆಗಳ ಪುನಶ್ಚೇತನಗೊಳಿಸುವುದು, ಪಿಚ್ಚಿಂಗ್ ಮತ್ತು ರಿವಿಟ್ ಮೆಂಟ್ ಮಾಡುವುದು ಮತ್ತು ಕೆರೆಗಳ ಅಂಚಿನ ಖಾಲಿ ಪ್ರದೇಶದಲ್ಲಿ ಸಸಿಗಳನ್ನು ಬೆಳೆಸುವುದು (ಅರಣ್ಯೀಕರಣ) ಮತ್ತು ಕೆರೆಗಳ ಅಂಗಳವನ್ನು ಸುಂದರೀಕರಣಗೊಳಿಸುವುದು ಮುಂತಾದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶ ಹೊಂದಲಾಗಿದೆ.

ಈ ಕಾರ್ಯವನ್ನು ಯಶಸ್ವಿಯಾಗಿ ಅನುಷ್ಠಾಗೊಳಿಸಲು ಪ್ರತಿ ಕೆರೆಗೆ ಅನುದಾನವನ್ನು ಒದಗಿಸಲು ಸರ್ಕಾರವು ಉಲ್ಲೇಖ(2)ರ ನ್ವಯ ಅನುಮೋದನೆ ನೀಡಿದೆ. ಯೋಜನೆಗೆ ತಗಲುವ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆ ಮಾಡುವ ಅನುದಾನದೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲ, ತಾಲ್ಲೂಕು ಪಂಚಾಯಿತಿ /ಜಿಲ್ಲಾ ಪಂಚಾಯಿತಿಗಳಲ್ಲಿ ಲಭ್ಯವಿರುವ ಅನುದಾನ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ (MLA.LAD Fund), ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿ ನಿಧಿ(CSR) ಗಳನ್ನು ಬಳಸಿಕೊಂಡು ಒಗ್ಗೂಡಿಸುವ ಮೂಲಕ ಅನುಷ್ಠಾನಗೊಳಿಸಲಾಗುವುದು.

ಪ್ರಸ್ತುತ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯದ 33000 ಗ್ರಾಮ ಪಂಚಾಯಿತಿ ಕೆರೆಗಳ ಪೈಕಿ, 1000 ಕೆರೆಗಳನ್ನು ಗುರುತಿಸಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲು ತೀರ್ಮಾನಿಸಿದಂತೆ, ಜಿಲ್ಲಾವಾರು ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಕೆರೆಗಳ ಆಯ್ಕೆ ಪಟ್ಟಿಯನ್ನು ಅನುಮೋದಿಸಬೇಕಾಗಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ: 57: ಸುಗ್ರಾಯೋ: 2022 (ಇ-778573) ಬೆಂಗಳೂರು, ದಿನಾಂಕ: 0407.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯದ 33000 ಗ್ರಾಮ ಪಂಚಾಯಿತಿ ಕೆರೆಗಳ ಪೈಕಿ 1000 ಕೆರೆಗಳನ್ನು ಆಯ್ಕೆ ಮಾಡಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲು ತೀರ್ಮಾನಿಸಿದಂತೆ, ಸರ್ಕಾರಕ್ಕೆ ಉಲ್ಲೇಖ (3)ರಲ್ಲಿ ಸ್ವೀಕೃತವಾದ ಪ್ರಸ್ತಾವನೆಯಂತೆ **ಬೆಂಗಳೂರು ನಗರ ಜಿಲ್ಲೆಯಿಂದ** ಒಟ್ಟು 14 ಕೆರೆಗಳನ್ನು **ಅನುಬಂಧದ**ಲ್ಲಿರುವಂತೆ ಆಯ್ಕೆ ಮಾಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

**ಷರತ್ತುಗಳು:-**

1. ಕಾರ್ಯಕ್ರಮ ಅನುಷ್ಠಾನ ಮಾಡುವಾಗ ಸಂಬಂಧಪಟ್ಟ ಯೋಜನೆಗಳ ಮಾರ್ಗಸೂಚಿಗಳಲ್ಲಿ ತಿಳಿಸಿದಂತೆ ಅನುಷ್ಠಾನ ಮಾಡುವುದು.
2. ಕಡ್ಡಾಯವಾಗಿ ಅನುಷ್ಠಾನ ಮಾಡಬೇಕಾದ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ರೂಪಿಸಿ ಆಯಾ ಜಿಲ್ಲಾ ಪಂಚಾಯಿತಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದು.
3. ನರೇಗಾ (MGNREGA) ಯೋಜನೆಯಡಿ ಕೈಗೊಳ್ಳಬಹುದಾದ ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ ಕ್ರಿಯಾಯೋಜನೆ ರೂಪಿಸಿಕೊಂಡು ಪ್ರಸಕ್ತ ಆರ್ಥಿಕ ಸಾಲಿನ ಮಾರ್ಚ್-2023ರ ಅಂತ್ಯದೊಳಗೆ ಎಲ್ಲಾ ಕಾಮಗಾರಿಗಳನು ಪೂರ್ಣಗೊಳಿಸುವುದು.
4. ಯೋಜನೆಗೆ ಇತರೆ ಮೂಲಗಳಿಂದ ದೊರೆಯಬಹುದಾದ ಆರ್ಥಿಕ ದೇಣಿಗೆ, ಭೌತಿಕ ಸಂಪನ್ಮೂಲಗಳು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ, ಸಿ.ಎಸ್.ಆರ್ ಅನುದಾನದೊಂದಿಗೆ ಒಗ್ಗೂಡಿಸುವ ಮೂಲಕ ಅನುಷ್ಠಾನಗೊಳಿಸುವುದು.
5. ಸರ್ಕಾರದ ಪತ್ರ ಸಂಖ್ಯೆ:RDC-EGS/347/2022(Part-1), ದಿ:07.06.2022 ರ ಮೂಲಕ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸಿ ಸಮರ್ಪಕವಾಗಿ ಅನುಷ್ಠಾನ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**Signed by Ravikumar**
**Date: 04-07-2022 15:51:07**

04/07/2022

**(ಎನ್. ರವಿಕುಮಾರ್)**
ಉಪ ನಿರ್ದೇಶಕರು (ಗ್ರಾಮೀಣಾಭಿವೃದ್ಧಿ)ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ರವರಿಗೆ:**

1. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಅಡಿಟ್-1) ಮತ್ತು (ಅಡಿಟ್-2), ಕರ್ನಾಟಕ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ,
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
12. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಬೆಂಗಳೂರು.
13. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ. ಮತ್ತು ಪಂ. ರಾಜ್ ಇಲಾಖೆ, ಬೆಂಗಳೂರು.
14. ಆಯುಕ್ತರು, ಪಂ.ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಬೆಂಗಳೂರು
15. ಆಯುಕ್ತರು, ಗ್ರಾ.ಕು.ನೀ. & ನೈ. ಇಲಾಖೆ, ಕಾವೇರಿಭವನ, ಕೆ.ಜಿ. ರಸ್ತೆ, ಬೆಂಗಳೂರು.
16. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು.
17. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆರೆ ಸಂರಕ್ಷಣೆ & ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
18. ವಿಶೇಷಾಧಿಕಾರಿಗಳು (ಜಿ.ಪಂ.) ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.

19. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ. ಅ ಮತ್ತು ಪಂ. ರಾಜ್ ಇಲಾಖೆ, ಬೆಂಗಳೂರು.
20. ಎಲ್ಲಾ ನಿರ್ದೇಶಕರು, ಗ್ರಾ.ಅ ಮತ್ತು ಪಂ.ರಾಜ್ಇಲಾಖೆ, ಬೆಂಗಳೂರು.
21. ನಿರ್ದೇಶಕರು, ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ(KSRSAC), ಬೆಂಗಳೂರು.
22. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು.
23. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿಲ್ಲಾ ಪಂಚಾಯತ್, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
24. ಮುಖ್ಯಸ್ಥರು, ಗಣಕಕೋಶ, ಗ್ರಾ. ಪಂ.ರಾಜ್ ಇಲಾಖೆ, ವೆಬ್ ಸೈಟ್ ನಲ್ಲಿ ಅಳವಡಿಸಲು
25. ಸಂಪದಾಕರು,ಕರ್ನಾಟಕ ವಿಕಾಸ, ಪತ್ರಿಕೆಯಲ್ಲಿ ಪ್ರಕಟಿಸಲು.
26. ರಕ್ಷಾ ಕಡತ/ ಹೆಚ್ಚುವರಿ ಪ್ರತಿ

<u>ಅನುಬಂಧ</u>

**ಜಿಲ್ಲೆ: ಬೆಂಗಳೂರು ನಗರ**

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯಿತಿ | ಗ್ರಾಮ | ಆಯ್ಕೆ ಮಾಡಿದ ಕೆರೆ | ಮೊತ್ತ |
|---|---|---|---|---|---|
| 1. | ಬೆಂಗಳೂರು ಪೂರ್ವ | ಮಂಡೂರು | ಬೊಮ್ಮೇನಹಳ್ಳಿ | ಬೊಮ್ಮೇನಹಳ್ಳಿ ಸರ್ಕಾರಿ ಕೆರೆ | 140.00 |
| 2. | | ಕೊಡತಿ | ಸೂಲಿಕುಂಟೆ | ಸೂಲಿಕುಂಟೆ ಕೆರೆ | |
| 3. | | ಬಿದರಹಳ್ಳಿ | ಬೈಯಪ್ಪನಹಳ್ಳಿ | ಬೈಯಪ್ಪನಹಳ್ಳಿ ಕೆರೆ | |
| 4 | ಬೆಂಗಳೂರು ಉತ್ತರ | ದಾಸನಪುರ | ದಾಸನಪುರ | ದಾಸನಪುರ ಕೆರೆ | |
| 5. | | ಹುಸ್ಕೂರು | ಪಿಳ್ಳಹಳ್ಳಿ | ಪಿಳ್ಳಹಳ್ಳಿ ಕೆರೆ | |
| 6. | | ಆಲೂರು | ಕುದುರೆಗೆರೆ | ಕುದುರೆಗೆರೆ ಕೆರೆ | |
| 7. | ಬೆಂಗಳೂರು ದಕ್ಷಿಣ | ತರಳು | ಗುಳಕಮಲೆ | ಹೊಸಕೆರೆ | |
| 8. | | ಅಗರ | ಅಗರ | ಅಗರ ಕೆರೆ | |
| 9. | ಆನೇಕಲ್ | ಮಂಟಪ | ಮಳ್ಳೆನಲ್ಲಸಂದ್ರ | ಬಿದರೆ ಕೆರೆ | |
| 10. | | ಹುಲಿಮಂಗಲ | ಹುಲಿಮಂಗಲ, ಕೊಪ್ಪ, ಬಿಂಗಿಪುರ | ಹುಲಿಮಂಗಲ ದೊಡ್ಡಕೆರೆ | |
| 11. | | ಮುಗುಳೂರು | ತಿಂಡ್ಲು | ತಿಂಡ್ಲು ಕೆರೆ | |
| 12. | | ಬ್ಯಾಗಡದೇನಹಳ್ಳಿ | ಬ್ಯಾಗಡದೇನಹಳ್ಳಿ | ಬ್ಯಾಗಡದೇನಹಳ್ಳಿ ಕೆರೆ | |
| 13. | ಯಲಹಂಕ | ಮಾರೇನಹಳ್ಳಿ | ಮರಳುಕುಂಟೆ | ಮರಳುಕುಂಟೆ ಕೆರೆ | |
| 14. | | ಶಿವಕೋಟೆ | ಮತ್ಕೂರು | ಮತ್ಕೂರು ಕೆರೆ | |
| ಒಟ್ಟು | | | | | 140.00 |

N. R. 04/03/2022

**(ಎನ್. ರವಿಕುಮಾರ್)**
ಉಪ ನಿರ್ದೇಶಕರು (ಗ್ರಾಮೀಣಾಭಿವೃದ್ಧಿ)ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ